ತೆರೆಯುವುದರಲ್ಲಿದ್ದವನು, ಸುಮ್ಮನಾದೆ. ಆದರೆ ನನ್ನ ಇಂಗಿತವನ್ನು ಅರಿತವಳಂತೆ ಮಧು ಹೇಳಿದಳು–

'ನಮ್ಮ ಅಮ್ಮನಿಗೆ ಹೀಗೆ ರಾತ್ರಿಯೆಲ್ಲ ಒಬ್ಬ ಗಂಡಸಿನ ಜತೆ ನಾನು ಹರಟ್ತಾ ಇದೇನೆ ಅಂತ ಗೊತ್ತಾದರೆ, ನನಗಾಗುತ್ತದೆ ಪೂಜೆ.'

ನನಗೆ ಮುಂದೆ ಮಾತಾಡಲು ಗೊತ್ತಾಗಲಿಲ್ಲ. ಈ ಸಾರಿ ಅವಳು ಟಿಕೆಟ್ ತೆಗೆದುಕೊಳ್ಳಲು ಕೌಂಟರಿಗೆ ಹೋದಾಗ, 'ಬೇಡ' ಎಂದು ಹೇಳಲು ಬಾಯಿ ಬರಲಿಲ್ಲ.

ತನ್ನ ಟಿಕೆಟ್ ಜತೆಗೆ ನನಗಾಗಿ ಒಂದು ಪ್ಲಾಟ್‌ಫಾರಂ ಟಿಕೆಟ್ ತೆಗೆದುಕೊಂಡ ಮಧು. ಅದನ್ನು ನನ್ನ ಕೈಯಲ್ಲಿ ಹಾಕಿ ಮುಂದೆ ನಡೆದಳು. ನಾನು ಅವಳನ್ನು ಹಿಂಬಾಲಿಸಿದೆ.

ಖಾಲಿಯಿದ್ದ ಹೆಣ್ಣುಮಕ್ಕಳ ಕಂಪಾರ್ಟ್‌ಮೆಂಟ್ ಒಂದರಲ್ಲಿ ಅವಳು ಹತ್ತಿ, ಕಿಟಿಕಿಯ ಸರಳುಗಳಿಗೆ ಮುಖ ಕೊಟ್ಟು ಕುಳಿತುಕೊಂಡಳು.

'ನನ್ನ ಮುಖ ನೋಡಿದರೆ, ನಿನ್ನದೇ ಮದುವೆ ಗೊತ್ತಾಗಿರೋ ಹಾಗಿದೆ'– ನನ್ನ ಮಾತು ಅವಳಿಗೆ ಇಷ್ಟವಾಗಲಿಲ್ಲ.

'ನನಗೆ ರೇಖಾನ ಬಗ್ಗೆ ಅನುಕಂಪ, ತಂದೆಯ ಬಗ್ಗೆ ಕಾತರ– ನಿಮಗೆ ಈ ಸೂಕ್ಷ್ಮ ಹೇಗೆ ತಾನೇ ಗೊತ್ತಾಗಬೇಕು.'

'ಇಷ್ಟರ ನಡುವೆ ನನಗಾಗಿ ಏನೂ ಇಲ್ಲವೆ?' –ತಡೆಯಲಾಗದೆ, ನಾನು ಬಾಯಿಬಿಟ್ಟು ಕೇಳಿಯೇಬಿಟ್ಟೆ.

'ಅದನ್ನು ಆಗಲೇ ಹೇಳಲಿಲ್ಲವೇ? ಮದುವೆ ಮತ್ತೊಂದು ನನಗರ್ಥವಾಗಲ್ಲ. ಆದರೆ ನಿಮ್ಮ ವಿಷಯವಾಗಿ ನನಗೆ ಆದರ ಇಲ್ಲದೆ ಇದ್ದರೆ, ನಿಮಗಾಗಿ, ಸಿನಿಮಾ ಬಾಗಿಲಲ್ಲಿ ಯಾಕೆ ಕಾಯಬೇಕಿತ್ತು?'

ಅವಳು ಕಿಟಕಿಯಲ್ಲಿ ಕೈಚಾಚಿ ನನ್ನ ಹಣೆಯ ಮೇಲಿನ ಮುಂಗುರುಳುಗಳನ್ನು ಹಿಂದಕ್ಕೆ ದೂಡತೊಡಗಿದಳು. ಮುಖ ಎತ್ತಿ ನಾನು ಹೇಳಿದೆ–

'ಕ್ವಿಲ್ಲರ್ ಕೂಚ್ ಎಂಬ ಪ್ರಬಂಧಕಾರ ಒಂದು ಸುಂದರ ಪ್ರಬಂಧ ಬರೆದಿದಾನೆ– ಬೀಳ್ಕೊಡುಗೆ ಬಗ್ಗೆ. ಹೊರದೇಶದಿಂದಲೇ ಬರೋ ಪ್ರವಾಸಿಗರು, ತಮಗೆ ಬೀಳ್ಕೊಡೋದಿಕ್ಕೋಸ್ಕರವೇ ದುಡ್ಡು ಕೊಟ್ಟು ಜನರನ್ನು ಗೊತ್ತುಮಾಡಿಕೊಳ್ತಾರಂತೆ.'

'ಅಂದರೆ ನನಗೂ ನಿಮ್ಮ ಅವಶ್ಯಕತೆ ಅಷ್ಟೇ ನಾಟಕೀಯವಾಗಿದೆ ಅಂತಲೆ?'

'ಹಾಗೆ ತಿಳಕೋಬೇಡ ಮಧು, ನಿನ್ನ ಸಂದರ್ಭದಲ್ಲಿ ನಾನಿದ್ದಿದ್ದರೆ, ಹೀಗೆಲ್ಲ ಮಾಡ್ತಿರಲಿಲ್ಲ, ಅನಿಸತ್ತೆ.'

'ಅದೇನಾದ್ರೂ ಅಂದ್ಕೊಳ್ಳಿ. ಈಗ ಒಂದೂವರೆ ಗಂಟೆಯಿಂದ ನನಗೆ ಕಂಪ್ನಿ ಕೊಟ್ಟಿದ್ದಕ್ಕೆ ನಾನು ಥ್ಯಾಂಕ್ಸ್ ಹೇಳಲೇಬೇಕು.'

ನಾನೂ ಕೈಚಾಚುತ್ತೇನೆ. ಅವಳು ತನ್ನ ಬೆಚ್ಚನೆಯ ಕೈಗಳಲ್ಲಿ ಅದನ್ನು ಅದುಮಿದಾಗ. ಇದುವರೆಗೂ ಅವಳು ಹೇಳದೆ ಇದ್ದ ಎಷ್ಟೋ ವಿಷಯಗಳು ನನ್ನೊಳಕ್ಕೆ ಹರಿದಂತಾಗುತ್ತದೆ.

ಅನಿರೀಕ್ಷಿತವಾಗಿ ನನ್ನ ಕಣ್ಣಲ್ಲಿ ಎರಡು ಹನಿ ಮೂಡುತ್ತದೆ.

'ದುಡಿಯೋ ಹುಡುಗರಿಗೆ ಮನೆ ಸಂಬಂಧ ಕಳಚಿಕೊಳ್ಳೋದು ಸುಲಭ. ನಮಗೆ ಹಾಗಲ್ಲ. ಅಮ್ಮ ಕೂಡ ಕೆಲವು ಸಾರಿ ಹುಚ್ಚು ಹುಚ್ಚಾಗಿ ನಡಕೊಳ್ತಾಳೆ.'

ಮಧು ಅಳಲಿಲ್ಲ. ಅವಳ ಸಂಯಮವನ್ನು ನಾನು ಇದುವರೆಗೂ ತಪ್ಪಾಗಿ ತಿಳಿದುಕೊಂಡೆ ಎನ್ನುವುದು, ಅವಳ ಮುಖದಲ್ಲಿ ವಿವರವಾಗಿತ್ತು.